ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಆ ಪ್ರದೇಶದಲ್ಲಿ 500 ಯೂನಿಟ್ ನೀರನ್ನೂ ನಿಲ್ಲಲು ಸಾಧ್ಯವಿದೆ, ಅಷ್ಟು ನೀರಿನ ನರಬರಾಯಿ ಇರುತ್ತೆಂದು ಅಂದಾಜು ತಯಾರಿಸಿ ತಮಗೆ ಬಂದಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ 500 ಯೂನಿಟ್ ನೀರನ್ನು ತಡೆಯತಕ್ಕ ಪ್ರಶ್ನೆಯೇ ಇಲ್ಲ. ಆ ನದಿಯಲ್ಲಿ ಅಷ್ಟು ಯೂನಿಟ್ ನೀರು ನರಬರಾಯಿ ಕೂಡ ಆಗುವುದಿಲ್ಲವೆಂದು ವರದಿ ಬಂದಿದೆ.

ಶ್ರೀ ಮುದ್ದುರಾಮಯ್ಯ.—ಅಲ್ಲಿ ಆ ಒಂದು ಅಣೆಕಟ್ಟು ಹಾಕುವುದರಿಂದ ನುಮಾರು 15 ಕೆರೆಗಳಿಗೆ ನೀರು ನರಬರಾಯಿ ಆಗುತ್ತದೆ ಎನ್ನುವ ವಿಚಾರ ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರೊಂದಿದ್ದರೆ ಎಷ್ಟು ಕೆರೆಗಳಿಗೆ ಬೇಕಾದರೂ ಅನುಕೂಲವಾಗುತ್ತದೆ. ಆದರೆ ಅಂಥ ಅನುಕೂಲ ಕಲ್ಪಿಸಲು ಆ ನದಿಯಲ್ಲಿ ನೀರೇ ಇಲ್ಲ.

ಶ್ರೀ ಮುದ್ದುರಾಮಯ್ಯ.—ಈ ನದಿಯಲ್ಲಿ ಮಳೆಗಾಲದಲ್ಲಿ ಮೂರು ನಾಲ್ಕು ತಿಂಗಳು ವಿಶೇಷ ಪ್ರವಾಹ ವಿರುತ್ತದೆ ಎಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು. ನೀರೇನೋ ಬರುತ್ತದೆ. ಕೊನೆಯ ಕೆರೆಯ ಹತ್ತಿರಕ್ಕೆ ನಾವು ಈ ನೀರನ್ನು ತೆಗೆದುಕೊಂಡು ಹೋಗುವ ವೇಳೆಗೆ ಆ ಕೆರೆಗೆ ಎಷ್ಟು ನೀರಿನ ಪ್ರಮಾಣದ ಅವಶ್ಯಕತೆ ಇರುತ್ತದೆಯೋ ಅಷ್ಟು ಪ್ರಮಾಣದ ನೀರು ದೊರೆಯುವುದಿಲ್ಲ.

ಶ್ರೀ ಮುದ್ದುರಾಮಯ್ಯ.—ತಾವು ಇನ್ನೊಮ್ಮೆ ಈ ವಿಚಾರವನ್ನು ಪರಿಶೀಲನೆ ಮಾಡಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಮಾಡಿಸಿರತಕ್ಕ ಪರಿಶೀಲನೆಗಳೇ ಸಾಕು. ಮತ್ತೊಮ್ಮೆ ಮಾಡಿಸಬೇಕೆಂದು ತಾವು ಅಪೇಕ್ಷಿಸುವುದಾದರೆ ಅದನ್ನೂ ಮಾಡೋಣ.

Pick-up near Siddeswaraswamy Temple, Motaganahally, Magadi Taluk.

Q.—608. Sri S. SIDDAPPA (Magadi).—

Will the Government be pleased to state :—

whether estimates have been prepared for the construction of a pick-up near Siddeswaraswmy Temple, Motaganahally, Magadi Taluk?

A.—Sri H. M. CHANNABASAPPA (Minister for Industries).—

An estimate is under preparation.

ಶ್ರೀ ಎಸ್. ಸಿದ್ದಪ್ಪ.—ಅಂದಾಜು ತಯಾರಾಗಿದೆ ಎಂದು ಅಪ್ಪಣೆ ಕೊಡಿಸಲಾಗಿದೆ. ಎಷ್ಟು ದಿವಸಗಳಲ್ಲಿ ಈ ನಾರೆಯ ಕೆಲಸ ಕಾರ್ಯರೂಪಕ್ಕೆ ಬರುತ್ತದೆ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಆ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಸಿದ್ದಪ್ಪ.—ಇದಕ್ಕೆ ಎಷ್ಟಕ್ಕೆ ಅಂದಾಜಾಗಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅರವತ್ತು ಸಾವಿರ ರೂಪಾಯಿಗಳಿಗೆ ಅಂದಾಜಾಗಿದೆ.

ಶ್ರೀ ಎಸ್. ಸಿದ್ದಪ್ಪ.—ಅಚ್ಚುಕಟ್ಟು ಎಷ್ಟು?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೂರು ಎಕರೆಗಳು.

Honnemaradu Project (Compensation for submerged lands).

Q.—380. Sri S. GOPALA GOWDA (Sagar-Hosanagar).—

Will the Government be pleased to state :—

(*a*) the extent of agricultural land that will be submerged after the completion of the Sharavathi Valley Hydel Project (Honnemaradu) (details of garden, wet and dry may be given);

(*b*) the number of persons who will be affected [details of persons (i) landed, (ii) landless may be given];

(*c*) the steps proposed to be taken to rehabilitate them;

(*d*) whether the Government would consider the question of providing land and other facilities along with compensation for submerged properties in advance to the affected persons?

A—Sri H. M. CHANNABASAPPA (Minister for Industries).—

(*a*) 19,500 acres.

Details are as below :—

Dry	...	2,500 acres
Wet	...	15,000 acres
Garden	...	2,000 acres

(*b*) Details will only be available after contour surveys, now in progress, are completed.

(*c*) It is proposed to provide land and building sites and other facilities on the usual scale to the displaced persons. Sanction has been accorded to the appointment of a Land Acquisition and Rehabilitation Officer with necessary staff.

(*d*) Yes.

ಶ್ರೀ ಎಸ್. ಗೋಪಾಲಗೌಡ.—ಸರ್ಕಾರದವರು ಈ ಮುಳುಗಡೆ ಆದುದರ ಸಂಬಂಧವಾಗಿ ಪರಿಹಾರ ಕೊಡತಕ್ಕ ಬಗ್ಗೆ ಯಾವ ನೀತಿಯನ್ನು ಅನುಸರಿಸಿ ಕೊಡುತ್ತಿದ್ದೀರಿ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಕಾನೂನು ಬದ್ಧವಾಗಿ ಏನೇನು ಪರಿಹಾರ ನೀಡಬೇಕೆಂದಿರುತ್ತದೆಯೋ ಅದರ ಪ್ರಕಾರ ಪರಿಹಾರವನ್ನು ನೀಡುತ್ತಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಆ ಕಾನೂನಿನಲ್ಲಿ ಯಾವ ರೀತಿ ಇದೆ ಎಂಬುದನ್ನು ತಿಳಿಸುವಿರಾ?